## ಕವಿತೆ




**ಅರುಣ್ ಜೋಳದಕೂಡ್ಲಿಗಿ**

ಕಲೆ: ರೂಪಶ್ರೀ ಕಲ್ಲಿಗನೂರು


# ತಾಯಿ ಹೊಟ್ಟೆ ತಣ್ಣಗಿದೆ



ನಾ ತೊಟ್ಟ ಶರ್ಟು
ತನ್ನ ಮೈಮೇಲೆ ಹರಿದಾಡಿದ
ಇಸ್ತ್ರಿ ಪೆಟ್ಟಿಗೆಯ ನೆನಪಿಸಿಕೊಂಡಾಗಲೆಲ್ಲಾ
ಮೈಸುಟ್ಟು ಬೊಬ್ಬೆ ಬರುತ್ತವೆ...
ತಾಯಿ ಹೊಟ್ಟೆ ತಣ್ಣಗಿದೆ...
ಶರ್ಟು ತನ್ನ ಹೊಲೆದ ಹೊಲಿಗೆ ಯಂತ್ರವ
ನೆನಪಿಸಿಕೊಂಡಿಲ್ಲ
ಮೈಯೊಳಗೆ ಸೂಜಿ ಹಾದು ಬಂದು
ದಾರಗಳು ಗಂಟು ಹಾಕುವುದ ಕಲ್ಪಿಸಿಕೊಂಡರೆ
ರಕ್ತ ಚಿಮ್ಮಿದಂತಾಗಿ ಚೀರುತ್ತೇನೆ...

ರಾಗಿ ಮುದ್ದೆಯನ್ನು ಗುಳುಂ ಎಂದು
ನುಂಗುವುದು ಎಷ್ಟು ಸುಲಭ
ಎಂದು ನಾನು ಭಾವಿಸುವುದಿಲ್ಲ
ಮುದ್ದೆಯ ಗುಕ್ಕು ಗಂಟಲಲ್ಲಿ ಇಳಿವಾಗ
ಒಮ್ಮೊಮ್ಮೆ ರಾಗಿ ತನ್ನ ಕೊಯ್ದ ಕುಡುಗೋಲನ್ನು
ನೆನಪಿಸಿಕೊಳ್ಳುತ್ತದೆ...
ತಾಯಿ ಹೊಟ್ಟೆ ತಣ್ಣಗಿದೆ...
ಹಿಟ್ಟಿನ ಗಿರಣಿಯೊಳಗೆ
ಬೀಸುಕಲ್ಲಿನ ಯಂತ್ರಕ್ಕೆ ಸಿಕ್ಕು ಹಿಟ್ಟಾಗುವುದ
ನೆನಪಿಸಿಕೊಂಡು ನಾನು ಗುರುತು ಸಿಗದಂತೆ
ಜಜ್ಜಿಹೋಗಿ ಮುದ್ದೆಗೆ ಚಟ್ನಿಯಾಗದಂತೆ
ರಾಗಿ ಅಭಯ ನೀಡಿದೆ